ಕನಕರಾಜ್ ಆರನಕಟ್ಟೆ

# ಕೆಒಕೆ

## ಎಂಬ ನವ್ಯೋತ್ತರ ಸಿನಿಮಾ



ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ

ಜಗತ್ತಿನ ಅತಿ ಶ್ರೇಷ್ಠ ಸಿನಿಮಾ ನಿರ್ದೇಶಕರು ಎಂದು ಗುರುತಿಸಲ್ಪಡುವ ರಾಬರ್ಟ್ ಬ್ರೆಸಾನ್, ಟಾರ್ಕೊವಸ್ಕಿ, ಕುರಸೊವಾ, ಅಬ್ಬಾಸ್ ಕರ್ತಸೊಮಿಯವರ ಆಳ ಪ್ರಭಾವದಲ್ಲಿ ಅರಳಿದ ಈ ನಿರ್ದೇಶಕ ಸಮಕಾಲೀನ ಸಿನಿಮಾ ಜಗತ್ತಿನ ಬಹುಮುಖ್ಯ ಅಂಗ; ಯುರೋಪ್ ಕಲಾತ್ಮಕ ಸಿನಿಮಾಗಳ ಭವ್ಯ ಇತಿಹಾಸವನ್ನು ಮುಂದುವರೆಸುತ್ತಿರುವ ಈತನ ಹೆಸರು ಮೈಖೇಲ್ ಹನೆಕೆ. ಹುಟ್ಟಿದ್ದು ಆಸ್ಟ್ರಿಯಾದಲ್ಲಾದರೂ ತನ್ನ ಸೃಜನಶೀಲ ಬೇರುಗಳನ್ನು ಈತ ಹರಡಿಕೊಂಡಿರುವುದು ಫ್ರಾನ್ಸ್‌ನಲ್ಲಿ; ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಚಲನಚಿತ್ರಗಳನ್ನು ನಿರ್ದೇಶಿಸುತ್ತಿರುವ ಹನೆಕೆ ನಮ್ಮ ಕಾಲದ ಶ್ರೇಷ್ಠ ಸಿನಿಮಾ ನಿರ್ದೇಶಕರಲ್ಲೊಬ್ಬ ಎಂದೇ ಹಲವು ಸಿನಿಮಾ ತಜ್ಞರು ಗುರುತಿಸುತ್ತಾರೆ.

ಸಮಾಜ ಮತ್ತದರ ವಿನ್ಯಾಸಗಳನ್ನು ಪ್ರಶ್ನಿಸುವ ಮತ್ತು ಜೀವಪರ ಸಮಾಜಕ್ಕಾಗಿ ಹಾತೊರೆವ